## ಜಯದೇವ ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಪರಿಶೀಲಿಸಿದ ಡಾ.ಮಂಜುನಾಥ

# ಫೆಬ್ರವರಿಯಲ್ಲಿ ಭೂಮಿ ಪೂಜೆ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಜಿಲ್ಲಾ ಆರೋಗ್ಯಾಧಿಕಾರಿ (ಡಿಎಚ್‌ಒ) ಕಚೇರಿ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ಹೊಸ ಕಟ್ಟಡ ನಿರ್ಮಾಣಕ್ಕೆ 2020ರ ಫೆಬ್ರವರಿಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಡಿಗಲ್ಲು ಹಾಕಲಿದ್ದಾರೆ ಎಂದು ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ ತಿಳಿಸಿದ್ದಾರೆ.

ಸರ್ಕಾರ ಮಂಜೂರು ಮಾಡಿದ 7.11 ಎಕರೆ ಜಾಗವನ್ನು ಮಂಗಳವಾರ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, 300 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ಕಟ್ಟಡವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 150 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದರು.

ಮೂರು ವರ್ಷಗಳಲ್ಲಿ ನಿರ್ಮಾಣ ಕಾರ್ಯ ಮುಗಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಬಹುಮಹಡಿ ಕಟ್ಟಡದಲ್ಲಿ 4 ಒಟಿ, 4 ಕ್ಯಾಥಲ್ಯಾಬ್, ಸೂಪರ್ ಸ್ಪೆಷಾಲಿಟಿ ಸೇರಿ ಎಲ್ಲ ದರ್ಜೆ ವಾರ್ಡ್‌ಗಳಿರಲಿವೆ. ರೋಗಿಗಳ ಸಹಾಯಕರಿಗಾಗಿ ಅತಿಥಿ ಗೃಹ ಸಹ ನಿರ್ಮಿಸಲಾಗುವುದು. 150 ಕೋಟಿ ರೂ.ಗಳಲ್ಲಿ ಎಲ್ಲ ಪೂರ್ಣಗೊಳ್ಳಲಿದೆ. ಹಣದ ಕೊರತೆಯಾದರೆ ಜಯದೇವ ಸಂಸ್ಥೆ ಆಂತರಿಕ ಸಂಪನ್ಮೂಲದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಎಂದು ಡಾ.ಮಂಜುನಾಥ ತಿಳಿಸಿದರು.

ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ, ಜಯದೇವ ಸಂಸ್ಥೆ ನಿರ್ದೇಶಕ ಡಾ.ಬಾಬುರಾವ ಹುಡಗೀಕರ್, ಕಾರ್ಡಿಯೋಲಾಜಿ ಮುಖ್ಯಸ್ಥ ಡಾ.ವಿರೇಶ ಪಾಟೀಲ್, ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷ ಎಚ್. ವೀರಭದ್ರಪ್ಪ, ಹಿರಿಯ ವೈದ್ಯ ಡಾ.ಶಿವರಾಜ ಅಲಶೆಟ್ಟಿ, ಮುಖ್ಯ ಆಡಳಿತಾಧಿಕಾರಿ ಚಿಕ್ಕತಿಮ್ಮಯ್ಯ, ಎಚ್‌ಕೆಸಿಸಿಐ ಅಧ್ಯಕ್ಷ ಅಮರನಾಥ ಪಾಟೀಲ್, ಉಪಾಧ್ಯಕ್ಷ ಶರಣು ಪಪ್ಪಾ, ಕಾರ್ಯದರ್ಶಿ ಶಶಿಕಾಂತ ಪಾಟೀಲ್ ಚಿತ್ತಾಪುರ, ಸಾರ್ವಜನಿಕ ಸಂಪರ್ಕಾಧಿಕಾರಿ ಸಂತೋಷ ಇತರರಿದ್ದರು.



ಕಲಬುರಗಿಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಗೆ ಮಂಜೂರಾಗಿರುವ ಡಿಎಚ್‌ಒ ಕಚೇರಿ ಸ್ಥಳ ಪರಿಶೀಲಿಸಿದ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ ಕಟ್ಟಡ ನೀಲಿನಕ್ಷೆ ತೋರಿಸಿದರು. ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ, ಡಾ.ಬಾಬುರಾವ ಹುಡಗಿಕರ್, ಡಾ.ಮಾಧವರಾವ ಪಾಟೀಲ್, ಡಾ.ವೀರಭದ್ರಪ್ಪ ಇತರರಿದ್ದರು.

### ಇನ್ನೆರಡು ತಿಂಗಳಲ್ಲಿ ಇನ್ನೊಂದು ಕ್ಯಾಥಲ್ಯಾಬ್

ಕಲಬುರಗಿ ಜಯದೇವ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಿದೆ. ಹೀಗಾಗಿ ಎಂಜಿಯೋಗ್ರಾಮ್, ಎಂಜಿಯೋಪ್ಲಾಸ್ಟಿಗೆ ಎರಡು ತಿಂಗಳಲ್ಲಿ ಇನ್ನೊಂದು ಕಾರ್ಡಿಯಾಕ್ ಕ್ಯಾಥಲ್ಯಾಬ್ ಸ್ಥಾಪಿಸಲಾಗುವುದು ಎಂದು ಡಾ.ಮಂಜುನಾಥ ತಿಳಿಸಿದರು. 2016ರಲ್ಲಿ ಆರಂಭಗೊಂಡ ಜಯದೇವ ಹೃದ್ರೋಗ ಸಂಸ್ಥೆಯಿಂದ ಜನರಿಗೆ ಗುಣಮಟ್ಟದ ಸೇವೆ ಸಿಗುತ್ತಿದೆ. ಸದ್ಯಕ್ಕೆ 8 ಹೃದ್ರೋಗ ತಜ್ಞರು ಹಾಗೂ 5 ಶಸ್ತ್ರಚಿಕಿತ್ಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿದಿನ 350 ಜನರು ಹೊರರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದುವರೆಗೆ 2 ಲಕ್ಷಕ್ಕೂ ಹೆಚ್ಚು ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. 135 ಹಾಸಿಗೆಯ ಈ ಆಸ್ಪತ್ರೆಯಲ್ಲಿ 16351 ಜನರು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. 411 ತೆರೆದ ಹೃದಯ ಶಸ್ತ್ರಚಿಕಿತ್ಸೆ, ಎಂಜಿಯೋಗ್ರಾಮ್ (ಸಿಎಜಿ), ಎಂಜಿಯೋಪ್ಲಾಸ್ಟಿ, ಪಿಟಿಎ, ಪಿಪಿಐ ಹೀಗೆ 13,404 ಜನರಿಗೆ ಕ್ಯಾಥಲ್ಯಾಬ್ ಚಿಕಿತ್ಸೆ ನೀಡಲಾಗಿದೆ. ಬೆಂಗಳೂರಲ್ಲಿ 700, ಮೈಸೂರಲ್ಲಿ 400 ಹೊರರೋಗಿಗಳು ಬರುತ್ತಾರೆ. ಬೆಂಗಳೂರಿನಲ್ಲಿ ಇನ್ಫೋಸಿಸ್‌ನವರು 200 ಹಾಸಿಗೆಯ ಇನ್ನೊಂದು ಆಸ್ಪತ್ರೆ ನಿರ್ಮಿಸಿಕೊಡುತ್ತಿದ್ದಾರೆ ಎಂದು ತಿಳಿಸಿದರು.

---

ಸದ್ಯಕ್ಕೆ ಹೊಸ ಶಾಖೆ ತೆರೆಯುವ ಉದ್ದೇಶವಿಲ್ಲ. ಹೃದಯಸಂಬಂಧಿ ಚಿಕಿತ್ಸೆ ಹಾಗೂ ಸೇವೆ ಅತ್ಯಂತ ಕಡಿಮೆ ದರದಲ್ಲಿ ಸಿಗುತ್ತವೆ. ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಹಣವಿಲ್ಲದಿದ್ದರೂ ಮೊದಲು ಚಿಕಿತ್ಸೆ ನೀಡಲಾಗುತ್ತದೆ. ವಿವಿಧ ಆರೋಗ್ಯ ಯೋಜನೆಗಳಡಿ ಚಿಕಿತ್ಸೆ ಲಭ್ಯವಿದೆ. ಸರ್ಕಾರಿ ವೈದ್ಯಕೀಯ ಕಾಲೇಜಿನವರು ಸಣ್ಣ ಪ್ರಮಾಣದ ಹೃದ್ರೋಗ ಘಟಕ ತೆರೆಯಲು ಮುಂದಾದರೆ ಎಲ್ಲ ರೀತಿಯ ತಾಂತ್ರಿಕ ಸಲಹೆ ನೀಡುತ್ತೇವೆ.

| ಡಾ.ಸಿ.ಎನ್. ಮಂಜುನಾಥ
ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

ಕಲಬುರಗಿಯಲ್ಲಿ ಜಯದೇವ ಶುರುವಾದಾಗಿನಿಂದ ಸ್ವಂತ ಕಟ್ಟಡಕ್ಕಾಗಿ ಪ್ರಯತ್ನಿಸುತ್ತಿದ್ದೇವು. ಈಗ ಕಾಲ ಕೂಡಿ ಬಂದಿದೆ. 150 ಕೋಟಿ ರೂ. ವೆಚ್ಚದಲ್ಲಿ ಆಸ್ಪತ್ರೆ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಹಸಿರು ನಿಶಾನೆ ತೋರಿಸಿದೆ. ಸಿಎಂ ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ವಿಮಾನಯಾನ ಆರಂಭಗೊಂಡಿದ್ದರಿಂದ ತುರ್ತು ಸಂದರ್ಭದಲ್ಲಿ ವೈದ್ಯರು ಬೆಂಗಳೂರಿನಿಂದ ಕಲಬುರಗಿಗೆ ಬಂದು ಚಿಕಿತ್ಸೆ ನೀಡಲು ಸಹಕಾರಿಯಾಗಿದೆ.

| ದತ್ತಾತ್ರೇಯ ಪಾಟೀಲ್ ರೇವೂರ ಶಾಸಕ






Scanned by CamScanner